# ಇತರೆ ಕಾರ್ಯಕ್ರಮಗಳು

## ನಮ್ಮ ಭೂಮಿ - ನಮ್ಮ ತೋಟ

ಈ ನೂತನ ಯೋಜನೆಯನ್ನು 2005-06ನೇ ಸಾಲಿನಿಂದ ರಾಜ್ಯದ ಭೂರಹಿತ ಕೃಷಿ ಕಾರ್ಮಿಕರಿಗಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿರುವ ಭೂರಹಿತ ಕೃಷಿ ಕಾರ್ಮಿಕರ ಜೀವನ ಸುಧಾರಿಸಲು ಸಾಮಾಜಿಕ ಮತ್ತು ಆರ್ಥಿಕ ಸುಸ್ಥಿತಿ ಜೊತೆಗೆ ಅವರು ಆರೋಗ್ಯವಂತ ಉತ್ತಮ ಪರಿಸರದಲ್ಲಿ ಬಾಳುವಂತೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಈ ಯೋಜನೆಯಡಿ ಫಲಾನುಭವಿಯ ಆಯ್ಕೆಯು ವಾರ್ಡ್‌ಸಭೆಯ ಶಿಫಾರಸ್ಸುಗಳನ್ನು ಪರಿಗಣಿಸಿ ಗ್ರಾಮ ಸಭೆಯಲ್ಲಿಯೇ ಮಾಡಲಾಗುವುದು. ಫಲಾನುಭವಿ ಕುಟುಂಬಗಳು ಕನಿಷ್ಠ ಪಕ್ಷ ಎರಡು ತಲೆಮಾರು ಯಾವುದೇ ಕೃಷಿ ಭೂಮಿಯನ್ನು ಹೊಂದಿರಬಾರದು ಹಾಗೂ ಜೀವನಕ್ಕಾಗಿ ಕೃಷಿ ಕೆಲಸದ ಮೇಲೆ ಅವಲಂಬಿತರಾಗಿರಬೇಕು.

ಒಂದು ಕುಟುಂಬಕ್ಕೆ ರೂ.6000/-ಮೊತ್ತದಲ್ಲಿ ಖರೀದಿಸಬಹುದಾದ ಸುಮಾರು 5 ಗುಂಟೆ ಖುಷ್ಕಿ ಅಥವಾ 2.5 ಗುಂಟೆ ನೀರಾವರಿ ಜಮೀನನ್ನು ನೀಡಲಾಗುವುದು. ಗ್ರಾಮ ಪಂಚಾಯತಿಯು ರಸ್ತೆ ಬದಿಗೆ ಅಥವಾ ಗ್ರಾಮಕ್ಕೆ ಹತ್ತಿರವಾದ ಮತ್ತು ಫಲವತ್ತಾಗಿರುವ ಜಮೀನನ್ನು ಸಾಮಾಜಿಕ ನ್ಯಾಯ, ಸ್ಥಾಯಿಸಮಿತಿಯ ಶಿಫಾರಸ್ಸುಗಳ ಮೇರೆಗೆ ಖರೀದಿಸುತ್ತದೆ. ಜಮೀನನ್ನು 20 ವರ್ಷಗಳ ಕಾಲ ಭೂಪರಿವರ್ತನೆ ಅಥವಾ ಹಸ್ತಾಂತರಿಸದಂತೆ ಪರಿಶ್ತಾ ವಿಧಿಸಿ ಅರ್ಹ ಕುಟುಂಬಕ್ಕೆ ಗ್ರಾಮ ಪಂಚಾಯತಿಯು ಜಮೀನು ನೀಡುವುದು. ಪತಿ - ಪತ್ನಿಯರ ಹೆಸರಿನಲ್ಲಿ ಜಂಟಿ ಪಟ್ಟಾವನ್ನು ನೀಡಲಾಗುವುದು. ಸ್ವ ಸಹಾಯ ಗುಂಪಿನ ಅರ್ಹ ಸದಸ್ಯರ ಜಂಟಿ ಹೆಸರುಗಳಲ್ಲಿ ಪಟ್ಟಾವನ್ನು ನೀಡಲಾಗುವುದು. ಈ ಉದ್ದೇಶಕ್ಕಾಗಿ ಹೊಸ ಸ್ವ ಸಹಾಯ ಗುಂಪುಗಳನ್ನು ಸಹ ರಚಿಸಬಹುದಾಗಿರುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಸಮಾನ ವಿಸ್ತೀರ್ಣದ ಪ್ಲಾಟುಗಳನ್ನು ಜಮೀನಿನ ಮೇಲೆ ಗುರುತಿಸಿ ಹಂಚಿಕೆಯನ್ನು ಆದಷ್ಟು ಮಟ್ಟಿಗೆ ಚೀಟಿ ಎತ್ತುವ ಮೂಲಕ ಮಾಡಬಹುದಾಗಿರುತ್ತದೆ.